Regd No. M 1299 SATYAVADI Founded 1917

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 31 ಸಂಚಿಕೆ 35] ಶನಿವಾರ 8—11—47 [ಬಿಡಿ ಪ್ರತಿ 3 ಪೈ

ಪ್ರಭುದೇವ್ ಟಾಕೀಸ್ ಪ್ರಾರಂಭೋತ್ಸವ

[ಕಲಾವಂದಿಕಾರ ಕಾಂತರಿಂದ]

ನಿನ್ನೆತಾನೆ ಆರಂಭಗೊಂಡ ಪ್ರಭುದೇವ್ ಟಾಕೀಸ್ ವಿಚಾರವಾಗಿ ನಾಲ್ಕು ಮಾತು ಬರೆಯಲು ಸಂತೋಷವಾಗುವುದು! ಈ ಟಾಕೀಸ್ ಒಳಗಡೆ ಈಗ ಅಂದವಾಗಿದೆ ವೆಂಟಿಲೇಷನ್, ಫ್ಯಾನ್ ಸಿಸ್ಟಂ, ಎಕ್ಸಿಟ್ ಸೂಚನೆ, ಅಲ್ಲದೆ ಸೀಟಿಂಗ್, ಲೈಟಿಂಗ್ ಇವೆಲ್ಲಾ ಅಚ್ಚುಕಟ್ಟಾಗಿದೆ. ಚಿತ್ರಮಂದಿರ ಒಳಹೊಕ್ಕರೆ ಮನಸ್ಸಿಗೆ ಆಹ್ಲಾದ ಉಂಟಾಗುವುದು.

ಪ್ರಥಮತಃ ಪ್ರಾರಂಭಿಸಿರುವ ಚಿತ್ರ ವಂತೂ ಇನ್ನೂ ಸೊಗಸು. ಭಾರತದಲ್ಲಿ ಅದರಲ್ಲೂ ದಕ್ಷಿಣ ಭಾರತದಲ್ಲಿ ಈ ಭಾಗದ ಜನಜೀವನಕ್ಕೆ ಸರಿಹೊಂದು ವಂಥಾ ವಿಷಯವನ್ನಾರಿಸಿಕೊಂಡು ಕಾರ್ಟೂನ್ ಚಿತ್ರ ಇದುವರೆಗೆ ಬಂದೇ ಇರಲಿಲ್ಲ. ಇದೀಗ ಜಮಿನಿಯವರು ತೆಗೆದಿದ್ದಾರೆ. ಇನ್ನೂ ಲೇಟೆಸ್ಟ್ 'ನ್ಯೂಸ್' ರೀಲ್ಸೂ, ಜಮಿನಿಯರ ನಿನ್ನೆ ತಾನೇ ತಯಾರಾಗಿ ಇಂದು ತೆರೆಗೆ ಬಂದಿರುವ 'ಮಿಸ್ ಮಾಲಿನಿ' ತಮಿಳು ಚಿತ್ರವೂ ಪ್ರದರ್ಶಿತವಾಗಲಾರಂಭವಾಗಿದೆ.

'ಮಾಲಿನಿ' ಕಥೆ ಘನವಾದ ಹಾಸ್ಯ ಸಂಭಾಷಣೆಯಿಂದ ಕೂಡಿ ಸಲಿಲವೂ ಸುಂದರವೇ ಇಗಿದೆ. ಆರಂಭದಿಂದ ಕೊನೆಯತನಕ ಸಂತಾಗವಾಗಿ ಹರಿಯುತ್ತೆ. ಸಂಗೀತ ಅರ್ಥಗರ್ಭಿತವಾಗಿ ಸುಖಕರವೆನಿಸಿದೆ ನೃತ್ಯದಲ್ಲಿಯೂ ಐತಿಹ್ಯ ನಾಜೂಕೂ ಇವೆ. ಮೈಸೂರಿನ ಪ್ರಸಿದ್ಧ ಇತಿಹಾಸಲೇಖಕ ಶ್ರೀ ಆರ್. ಕೆ. ನಾರಾಯಣ್‌ರು ರಚಿಸಿದ ಕಥೆ ಮೈಸೂರಿನ ಹೆರು ಹೆಮ್ಮೆ ಪಡುವ ರೀತಿ ಜಮಿನಿಯವರು ತಯಾರಿಸಿದ್ದಾರೆ

ಒಟ್ಟನಲ್ಲಿ ಥಿಯೇಟರ್ರೂ, ಪಿಕ್ಚರ್ರೂ ಪ್ರೇಕ್ಷಕರಿಗಾಗಿ ಏರ್ಪಡಿಸಿರುವ ಸಕಲ ಸಿದ್ಧತೆಗಳೂ, ಸಾರ್ವಜನಿಕರಿಗೆ ಸಮರ್ಪಣವಾಗಿದೆ ಮಾಲೀಕರೂ, ವ್ಯವಸ್ಥಾಪಕರೂ ಅಭಿನಂದನಾರ್ಹರೇ ಸರಿ.

ಮೆರಿಟ್ಟೂ, ಬ್ಯೂಟಿ, ಎಲ್ಲೇ ಇರಲಿ ಅದಕ್ಕೆ ಮೆಚ್ಚಿಕೆ ವ್ಯಕ್ತಪಡಿಸಬೇಕೆಂಬ ಜೈ ಇಜ್ಜೆಯೆರ ಈ ನಾಲ್ಕು ಮಾತು ಬರೆದಿದೇ ವಿನಃ ಮುತ್ತಾವ ಮೆಹರ್ಬಾನಿಗೂ ಬರೆದದ್ದಲ್ಲ.

ಸುದ್ದಿಗಳು

25000 ಮಂಡ ಘೂರ್ಕರನ್ನು ಕಾಶ್ಮೀರಕ್ಕೆ ಸೇನಾಳ ಕಳಿಸಲಿದೆ.

25 ಮಂದಿ ಮುಸ್ಲಿಂ ಸತ್ಯಾಗ್ರಹಿಗಳು ಡೆಲ್ಲಿಯಿಂದ ಹೈದರಾಬಾದಿಗೆ ಕಾಂಗ್ರೆಸ್ ಸಹಾಯಕ್ಕೆ ಹೊಂಟಿದೆ.

ಮೈಸೂರು ಜಿಲ್ಲಾ ಬೋರ್ಡಿನ ಅಧ್ಯಕ್ಷರಾದ ಶ್ರೀ ಚನ್ನಬಸಪ್ಪನವರು ಜಿಲ್ಲಾಧಿಕಾರಿಗಳಾದ ಶ್ರೀ ನಾಗರಾಜರಾಯರೂ, ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಶ್ರೀ ನಂಜರಾಜ ಅರಸಿನವರು ನಿನ್ನೆ ದಿವಸ ನಂಜನಗೂಡು ತಾಲ್ಲೂಕಿನ ಹಲವು ಹಳ್ಳಿಗಳಿಗೆ ಭೇಟಿ ಇತ್ತು ಅನ್ನ ಪರಿಸ್ಥಿತಿಯನ್ನು ವಿವರಿಸಿದರೆನ್ನಲಾಗಿದೆ. ಈ ಪ್ರವಾಸದಲ್ಲಿ ಇನ್ನೂರು ಪಲ್ಲ ಭತ್ತ ಕೊಡುವುದಾಗಿ ತಿಳಿಸಿದರು. ಅನ್ನ ಯಾತ್ರೆ ವಿಂದುವರಿಯುತ್ತಿದೆ

ಸಂಯುಕ್ತ ಪ್ರಾಂತ್ಯದ ಮುಂಡಲೀಕ ಪದವಿಯನ್ನು ಶ್ರೀ ಬಿ ಸಿ. ರಾಯ್ ನಿರಾಕರಿಸಿ ಬಂಗಾಳವಲ್ಲೇ ಅಗತ್ಯ ಕೆಲಸಗಳಿವೆ ಎಂದು ತಿಳಿಸಿದ್ದಾರೆ.

ಕೇಂದ್ರ ಸರ್ಕಾರದ ನ್ಯಾಯಾಂಗ ಸಚಿವರಾಗಿ ಸರ್ ಬಿ ಎನ್ ರಾವ್ ನೇಮಕವಾಗಬಹುದೆಂದು ಗೊತ್ತಾಗಿದೆ

ಅಕ್ಕಿಯ ಕಾಳಸಂತೆ ವ್ಯಾಪಾರ ಮತ್ತು ಲಂಚಕೋರತನ ಸಣ್ಣ ಅಧಿಕಾರಿಗಳಲ್ಲಿತ್ತು ಎಂದು ವಿದ್ಯಾಸಿನ ಮನೆ ಮಂತ್ರಿ ಶಾಸನ ಸಭೆಯಲ್ಲಿ ಹೇಳಿದರು.

ಮೂಧರ್ವ ಎಂಬ ಬಸ್ ಕಂಡಕ್ಟರನ್ನು ವಜಾ ಮಾಡಿದ ಪ್ರಯುಕ್ತ ಮದರಾಸಿನ ಬಸ್ ಕೆಲಸಗಾರರು ಮುಷ್ಕರ ಆರಂಭಿಸಿದ್ದಾರೆ.

ಬೊಂಬಾಯಿ, ನ 5 — ಗೋವಾದಿಂದ ಜನಗಡಕ್ಕೆ ಶಸ್ತ್ರಾಸ್ತ್ರಗಳು ಹೋಗುತ್ತಿದ್ದು, ಭಯಂಕರ ವಿರುದ್ಧ ಪ್ರಚಾರ ನಡೆಯುತ್ತಿದೆಯೆಂದು ಹೇಳಲಾಗಿದೆ.

69-21

ಹೈದರಾಬಾದು ಭಾರತ

ವಸಾಹತಿಗೆ ಶಿರೋವೇದನೆ

ನಿಜಾಂ ಪ್ರಜಾಕಂಟಕರಿಗೆ

ಪಟಾಬಿ ಎಚ್ಚೆರಿಕೆ

ಎ | ಟ

ಮಹಾಸಭಾಧ್ಯಕ್ಷರ ಮನವಿ

ವಸಾಹತಿಗೆ ಅಡಕೆಯಾಗುವ ಮುಖ್ಯ ಅಂತರ್ಯ ಸುಧಾರಣೆ ಬಗೆಗೆ ನಿಜಾಂ ಹೈದರಾಬಾದು ಅತ್ಮಹತ್ಯ ನೀತಿಯನ್ನು ಅನುಸರಿಸುತ್ತಿದೆ. ಸ್ವೇಚ್ಛಾ ರೀತಿಯಲ್ಲಿ ದಬ್ಬಾಳಿಕೆಯನ್ನು ಜರುಗಿಸುತ್ತಿರುವ ಆ ಸಂಸ್ಥಾನವನ್ನು ಎಚ್ಚರಿಸುತ್ತೇವೆ. ತಿರುವಾಂಕೂರು ಮತ್ತು ಮೈಸೂರು ಪರಿಸ್ಥಿತಿ ಏನಾಯಿತು ಎಂಬುದನ್ನು ನಿಜಾಂ ದೊರೆ ಗಮನಿಸಲಿ ! ಹೈದರಾಬಾದ್ ಭಾರತ ವಸಾಹತಿಗೆ ಶಿರೋವೇದನೆಯನ್ನುಂಟು ಮಾಡಿದೆ ಆ ವಿಷಯ ಎಷ್ಟು ಸತ್ಯವೋ, ಅಷ್ಟೇ ತೊಡಕನ್ನೂ ಉಂಟು ಮಾಡಿದೆ. ಆದರೆ ಅವುಗಳ ನಿವಾರಣೆ ಅತ್ಯಂತ ಸುಲಭವಿದೆ. ಪ್ರಾಂತೀಕರಣವೇ ಅದಕ್ಕೆ ಸಂಜೀವಿನ

—ಹೀಗೆಂದು ಅಖಿಲ ಭಾರತ ಸಂಸ್ಥಾನಿ ಪ್ರಜಾಪರಿಷತ್ತಿನ ಅಧ್ಯಕ್ಷರಾದ || ಪಟ್ಟಾಭಿ ಸೀತಾರಾಮಯ್ಯ ಮದ್ರಾಸಿನಿಂದ ನಿಜಾಂ ಪ್ರಭುವನ್ನು ಎಚ್ಚರಿಸಿದ್ದಾರೆ.

ಭಾರತ ಸರ್ಕಾರವೇ ! ಮುಂಬಯಿ ಮಂತ್ರಿ ಮಂಡಲವೇ !! ಮದಾಂಧ ಸ್ವ ಪ್ರಭುತ್ವವೇ !!! — ಹಿಂದೂ ಪ್ರಜಾಕೋಟಿ ಬಗೆಗೆ ಅಸಕ್ತಿಯನ್ನು ತಾಳಿ ಹೈದರಾಬಾದು ವಿಷಯದಲ್ಲಿ ಪ್ರವೇಶಿಸಿ ! ಹಿಂದೂಗಳ ವಿರುದ್ಧ ಸಮರ ಮಾರ್ಗದಲ್ಲಿ ನಿರತರಾಗಿರುವ ಮುಸಲ್ಮಾನರಿಂದ, ಸ್ವಸಹಾಯಕತ್ವಾಸ್ಯರಾಗಿರುವ ಹಿಂದೂಗಳನ್ನು ರಕ್ಷಿಸಿ. ಮಾನವ ದಯಾಭಾವನೆಯಿಂದ ಮಾಡುವ ಈ ಪವಿತ್ರ ಕಾರ್ಯ ವಿಪರೀತಾಧಿಕಾರವೆಂದು ತೋರುವುದಿಲ್ಲ

— ಹೀಗೆಂದು ಅಖಿಲ ಭಾರತ ಹಿಂದೂಮಹಾಸಭಾಧ್ಯಕ್ಷ ಶ್ರೀ ಭೂಪಟ್ಕರ್ ಆಗ್ರಹಪೂರ್ವಕ ಹೇಳಿಕೆಯಿತ್ತಿದ್ದಾರೆ

ಹೈದರಾಬಾದಿನಲ್ಲಿ ಸ್ವದೇಶ ರಕ್ಷಣೆಗೆ ಎಂದು ನಿಜಾಂ ಪ್ರಭುತ್ವ ಮಧ್ಯ ಸಾಮ್ರಾಜ್ಯ ಮತ್ತು ಬೇರೆಯರಿನಿಂದ ಬಂದ ಮುಸ್ಲಿಂ ನಿರಾಶ್ರಿತರನ್ನು ಪೋಲೀಸ್ ಪಡೆಗೆ ಸೇರಿಸುತ್ತಿರುವುದಂತೂ ಅಲ್ಲಿನ ಹಿಂದೂಗಳಿಗೆ ಬಹು ಭೀತಿಯನ್ನುಂಟು ಮಾಡಿದೆ.

ಇದೇ ರೀತಿಯು ಅತ್ಯಾಚಾರ, ಲೂಟಿ, ಭೀತಿ, ಗೂಂಡಾಗಿರಿ ನಡೆದಿದೆ ಬಹು ಸಂಖ್ಯಾಕರಾದ ಹಿಂದೂಗಳು ನಾಮಾವಶೇಷವಾಗುವರು.

Woodlands

ಅಮೋಘ 2 ನೇ ವಾರ

ಅಶೋಕಕುಮಾರ್
ವೀರಾ, ಪ್ಯಾರೊ, ಪಾತ್ರವಹಿಸಿರುವ

ಶಿಕಾರಿ

(ಅಮೋಘ ಹಿಂದಿ ಚಿತ್ರ)
ಪ್ರತಿದಿನ 3 ಆಟಗಳು

At Opera
4 th Glorious Week
MAD-MAN

.... with —

N.S.Krishnan, T A Maduram

Save the Cow

ಗೋ ವಧೆ ನಿಲ್ಲಲಿ

Edited, Printed and Publishe dby M. S Krishna Rao at the Satyavadi Press Chamaarja Agahar Myrsore.

Woodlands

Morning Shows at 10-30
From 7—11—47 For 4 days

God is My Co-Pilot

— starring —

Dennis Morgan, Dane Clark
Rapmond Massey, Alen Hale

ಸತ್ಯವಾದಿ

ದಿನಪತ್ರಿಕೆ. ತಿಂಗಳಿಗೆ ಆರಾಣೆ
ವಾರ್ಷಿಕ ಚಂದ ಪಂಸ್ಥಳಕ್ಕೆ
ಅಂಹವೆಚ್ಚಸೇರಿ ರೂ. 9.
ಸೋಮವಾರದ ಸಂಚಿಕೆ ಮಾತ್ರ
ವಾರ್ಷಿಕಚಂದಾ
ರಸ್ಥಳಕ್ಕೆ ಅಂಚೆವೆಚ್ಚ ಸೇರಿ 1-12-0

For Quality Printing

L. N. Press

Sriramp et, MYSORE

ಶಕ್ತಿಸುಧಾ

ಶಕ್ತಿಹೀನತೆಗೆ ಸಂಜೀವನ

ಉಡುಪುಗಳನ್ನು ಅತಿ ಬೊಕ್ಕಟವಾಗಿ ಒಗೆದು
— ಶುಭ್ರಮಾಡುವ ಸಾಧಕ —

ಮೈಸೂರು ಸಾಬೂನನ್ನು ಉಪಯೋಗಿಸಿದ ಹೊರತು, ಅಶ್ಚರ್ಯಕರವಾದಷ್ಟು ಮಟ್ಟಿಗೆ ಅದರಲ್ಲಿ ಅಡಗಿರುವ ನಿರ್ಮಲೀಕರಣಶಕ್ತಿಯನ್ನು ತಿಳಿಯಲಾರಿರಿ;

ಈ ಸಾಬೂನನ್ನು ಇವತ್ತು ಉಪಯೋಗಿಸಿ ನೋಡಿ;
ಅದರ ಪ್ರತಿಫಲವನ್ನು ಕಂಡು ನೀವೇ ಬೆರಗಾಗುವಿರಿ.



ಮೈಸೂರು ಸಾಬೂನು

ಕೊಳಕು ಬಟ್ಟೆಗಳನ್ನು
ಸ್ವಚ್ಛಗೊಳಿಸುವುದು

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು

ಭವತಿ ಭಿಕ್ಷಾಂದೇಹಿ !!

.... ನಮ್ಮ ಪಡಿತರ ಪಂಡಿತರು ಹಾಕಿರುವ ಕೂಗು.

ಜೋಳಿಗೆ ಆಳ

.... 10 ಸಾವಿರ ಪಲ್ಲಕ್ಕಿಂತ ಹೆಚ್ಚು ಭತ್ತ ಹಿಡಿಸುತ್ತೆ-

ನಗರವಾಸಿಗಳ ಕರ್ತವ್ಯ

.... ಹೊಟ್ಟೆ ಹಿಡಿದು ಕೊಟ್ಟು ಸಹವಾಸಿಗಳಿಗೆ ತುತ್ತೊದಗಿಸಬೇಕಾದುದು.

ಕನಸು - ನನಸು

.... ಹೊಟ್ಟೆ ತುಂಬಾ ಅನ್ನ ಹಾಕುತ್ತೇವೆ
— ಕಾಂಗ್ರೆಸ್ ನಾಯಕರ ನಿನ್ನೆಯ ನುಡಿ.

.... ಅದನ್ನು ಕೇಳಿದ ಜನಸ್ತೋಮ ನಿನ್ನೆ ರಾತ್ರಿ ಸಹ ಕನಸಿನಲ್ಲಿ ತೇಗಿತು.

ಜನರಿಗೆ ಎಚ್ಚರಿಕೆ

.... ಕನಸಿನ ತೇಗಿಗೆ ಕನಾಣರಾದ ಕಾಂಗ್ರೆಸ್ಸಿಗರೇ ಈಗ ಅನ್ನ ತುಂತ್ರಿ !

.... ಜನರೇ ! ಎಚ್ಚರಿಕೆಯಾಗಿ ! ಹೊಟ್ಟೆ ತುಂಬಿಕೊಳ್ಳಲು ತುತ್ತಿಗೆ ಬಾಯೊಡ್ಡಿ !

ಶ್ರೀ 'ಓಂ' ಗುರುತಿನ
ಅರಿಸಿದ ಪರಿಶುದ್ಧ ಕೇಸರಿ

ಈ ಶ್ರೀ ಓಂ ಗುರುತಿನ ಕೇಸರಿಯು ಗ್ಯಾರಂಟಿಯಾಗಿ ಪರಿಶುದ್ಧವಾದುದು. ಸ್ಪೇನ್ ದೇಶದಲ್ಲಿಯು ಕೇಸರಿ ಗಿಡಗಳಿಂದ ಅರಿಸಲ್ಪಟ್ಟ ಹೂಗಳಿಂದ ಕಿತ್ತಲ್ಪಟ್ಟು ಅರಿಸ ತೆಗೆಯಲ್ಪಟ್ಟಿದಾಗಿದೆ. ಇದರಲ್ಲಿ ಏನೇದು ಆಕ್ಷೇಪಣೀಯ ಪದಾರ್ಥವನ್ನೂ ಸೇರಿಲ್ಲ ಮತ್ತು ಧಾರ್ಮಿಕವಾಗಿಯೂ ಪರಿಶುದ್ಧವಾದುದು. ದೇವಾಲಯಗಳಲ್ಲಿಯೂ ದೇವರ ಪೂಜೆಗೂ ಮತ್ತು ಶುಭಕಾರ್ಯ ಸಮಾರಂಭಗಳಲ್ಲಿಯೂ ಎಲ್ಲ ಸಂತೋಷ ಮತ್ತು ಸಾಂಘಿಕ ಕೂಟಗಳಲ್ಲಿಯೂ ಉಪಯೋಗಿಸಲ್ಪಡಲಿದ್ದಾಗಿದೆ. ಎಂದು ಶಿಫಾರಸ್ ಮಾಡಲ್ಪಟ್ಟಿದೆ

ವಲ್ಲಭದಾಸ್ ತೇಜ್ಪಾಲ್
(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)
ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು